ಸಂಖ್ಯೆ: ಇಡಿ/ಕೆಇಎ/ಪಿಜಿಆಯುಷ್/2022 (ಮೊದಲ ಸುತ್ತು) ದಿನಾಂಕ: 15-03-2023

**ಪಿಜಿ ಆಯುಷ್ – 2022 ಆಯುರ್ವೇದ / ಯುನಾನಿ / ಹೋಮಿಯೋಪತಿ / ನ್ಯಾಚುರೋಪತಿ ಮತ್ತು ಯೋಗ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆ – 2022**

ಪಿಜಿ ಆಯುಷ್ – 2022 ಆಯುರ್ವೇದ / ಯುನಾನಿ / ಹೋಮಿಯೋಪತಿ / ನ್ಯಾಚುರೋಪತಿ ಮತ್ತು ಯೋಗ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗೆ ದಿನಾಂಕ 14-03-2023 ರಂದು ಸರ್ಕಾರವು ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳನ್ನು ನೀಡಿದ್ದು, ಅಭ್ಯರ್ಥಿಗಳ ಮಾಹಿತಿಗಾಗಿ ಕಾಲೇಜುವಾರು, ಪ್ರವರ್ಗವಾರು ಮತ್ತು ಕೋರ್ಸುವಾರು ಲಭ್ಯವಿರುವ ಸೀಟುಗಳನ್ನು 15-03-2023 ರಂದು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಈ ಹಿನ್ನಲೆಯಲ್ಲಿ ಮೊದಲನೇ ಸುತ್ತಿನ ಸೀಟು ಹಂಚಿಕೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.

Ayush Admissions Central Counseling Committee (AACCC) ಇವರು ದಿನಾಂಕ 02-03-2023 ರಂದು ಪ್ರಕಟಿಸಿರುವ ಸೂಚನೆಯಂತೆ ಅಭ್ಯರ್ಥಿಗಳು ಕ್ರಮವಹಿಸಲು ನಿರ್ದೇಶಿಸಿದೆ. ಇದರ ಅನ್ವಯ, ಈಗಾಗಲೇ ಅಖಿಲ ಭಾರತ ಮಟ್ಟದ ಮೊದಲನೇ ಹಾಗು ಎರಡನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಮತ್ತು ಮಾಪ್ ಅಪ್ ಸುತ್ತಿನಲ್ಲಿ ಸೀಟು ಹಂಚಿಕೆಯಾದವರು ಪ್ರಾಧಿಕಾರದ ಮೂಲಕ ಸೀಟುಗಳನ್ನು ಪಡೆಯುವುದಕ್ಕಾಗಿ ಭಾಗವಹಿಸಲು ಅರ್ಹತೆ ಪಡೆಯುವುದಿಲ್ಲ.

1. ಸೀಟ್ ಮ್ಯಾಟ್ರಿಕ್ಸ್ ಪಟ್ಟಿಯನ್ನು ಸರಿಯಾಗಿ ಅಭ್ಯಾಸ ಮಾಡಿ, ಶುಲ್ಕದ ವಿವರಗಳನ್ನು ನೋಡಿ.
2. ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಸೀಟುಗಳು, ಆಡಳಿತ ಮಂಡಳಿ ಕೋಟದ ಸೀಟುಗಳು, ಎನ್‌ಆರ್‌ಐ / ಆಡಳಿತ ಮಂಡಳಿ ಕೋಟದ ಸೀಟುಗಳಿಗೆ ಪ್ರತ್ಯೇಕವಾದ ಶುಲ್ಕಗಳು ಇದೆ ಎಂಬುದನ್ನು ಮನನ ಮಾಡಿಕೊಂಡು, ಮೊದಲು ನಿಮಗೆ ಇಚ್ಛೆಯಿರುವ ಕೋರ್ಸು/ ಕಾಲೇಜುಗಳ ಒಂದು ಪಟ್ಟಿಯನ್ನು ಮಾಡಿಕೊಳ್ಳಿ.
3. ಇಚ್ಛೆಯನ್ನು (Option) ನಮೂದಿಸುವಾಗ, ಆದ್ಯತಾ ಕ್ರಮ (prioritization) ಅನುಸರಿಸಿ.
4. ನಿಮಗೆ ಅತ್ಯಂತ ಹೆಚ್ಚು ಇಷ್ಟವಿರುವ ಕೋರ್ಸನ್ನು/ ಕಾಲೇಜುಗಳನ್ನು ಮೊದಲ ಆದ್ಯತೆಯ ಕ್ರಮ ಸಂಖ್ಯೆಗಳಲ್ಲಿ ನಮೂದಿಸಿ.
5. ವಿದ್ಯಾರ್ಥಿಗಳು ಇಚ್ಛೆಗಳನ್ನು ಆರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಮನೆಯಲ್ಲಿ ಪೂರ್ವಾಭ್ಯಾಸ ಮಾಡದೆ, ಅಂತರ್ಜಾಲದಲ್ಲಿನ ಆನ್‌ಲೈನ್ ಆಯ್ಕೆ ನಮೂನೆಯಲ್ಲಿ ನೇರವಾಗಿ ತಮ್ಮ ಇಚ್ಛೆಗಳನ್ನು ನಮೂದಿಸಬಾರದೆಂದು ಸಲಹೆ ನೀಡಲಾಗಿದೆ.
6. ಸೀಟು ಹಂಚಿಕೆ ಮಾಡುವುದಕ್ಕಾಗಿ ತಮಗೆ ಇಷ್ಟವಿರುವ ಕೋರ್ಸು, ಕಾಲೇಜುಗಳಿಗೆ ಇಚ್ಛೆಗಳನ್ನು ನಮೂದಿಸುವಾಗ ವಿದ್ಯಾರ್ಥಿಗಳು ಅತ್ಯಂತ ಎಚ್ಚರಿಕೆಯಿಂದ ನಮೂದಿಸಬೇಕು.

**ಇಚ್ಛೆ / ಆಯ್ಕೆಯನ್ನು ದಾಖಲಿಸುವ ಬಗ್ಗೆ ಮುಖ್ಯ ಸೂಚನೆ**

ಮೊದಲನೇ ಸುತ್ತಿನ ಸೀಟು ಹಂಚಿಕೆಗೆ ದಾಖಲಿಸುವ ಇಚ್ಛೆ / ಆಯ್ಕೆಗಳು, ಎಲ್ಲಾ ಸುತ್ತುಗಳಿಗೆ ಅನ್ವಯಿಸುತ್ತದೆ. ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ. ಎರಡನೇ ಸುತ್ತಿನಲ್ಲಿ ದಾಖಲಿಸಿದ ಇಚ್ಛೆ / ಆಯ್ಕೆಗಳನ್ನು ತೆಗೆದು ಹಾಕಲು ಅಥವಾ ಕ್ರಮಾಂಕಗಳನ್ನು ಬದಲಾಯಿಸಲು, ಅಭ್ಯರ್ಥಿಗಳು ಸೀಟು ಹಂಚಿಕೆಯ ಫಲಿತಾಂಶದ ನಂತರ opt ಮಾಡುವ CHOICE ಮೇಲೆ ಅವಲಂಬಿತವಾಗಿರುತ್ತದೆ.

- ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು NCISM, NCH, ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾಲಯಗಳು, ಅಪೆಕ್ಸ್ ಸಂಸ್ಥೆಗಳು ಕಾಲ ಕಾಲಕ್ಕೆ ನಿಗದಿಡಿಸುವ ನಿಯಮಗಳಿಗೆ / ಅನುಮೋದನೆಗೆ / ಷರತ್ತಿಗೆ ಒಳಪಟ್ಟಿರುತ್ತವೆ;
- ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು ಅಥವಾ ನಿಬಂಧನೆಗಳನ್ನು ಪೂರೈಸದ ಅಭ್ಯರ್ಥಿಯ ಪ್ರವೇಶವನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳುವ ಹಕ್ಕನ್ನು ಕೆಇಎ ಕಾಯ್ದಿರಿಸುತ್ತದೆ.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

No. ED/KEA/PGAYUSH/2022 (First Round)    Date: 15-03-2023

PG AYUSH-2022

First Round Schedule for allotment of seats to
Ayurveda, Unani, Homoeopathy, Naturopathy & Yoga Degree Courses – 2022

| | | |
|---|---|---|
| 01 | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ)<br>Entry of options (In the order of priority) | From 6.00 pm on 15-03-2023 To 18-03-2023 Up to 11.00 am |
| 02 | ಅಣುಕು ಸೀಟು ಹಂಚಿಕೆಯ ಫಲಿತಾಂಶ<br>Mock seat allotment results | 18-03-2023 after 6.00 pm |
| 03 | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಅಭ್ಯರ್ಥಿಗಳು ಅಣುಕು ಸೀಟು ಹಂಚಿಕೆಯ ಫಲಿಂತಾಂಶವನ್ನು ಪರಿಶೀಲಿಸಿದ ನಂತರ ಇಚ್ಛೆ / ಆಯ್ಕೆಗಳನ್ನು ಅವಶ್ಯವಿದ್ದಲ್ಲಿ ಬದಲಾಯಿಸಬಹುದಾಗಿದೆ / ಸೇರಿಸಬಹುದಾಗಿದೆ / ಅಳಿಸಬಹುದಾಗಿದೆ.)<br>After verifying the Mock Allotment results, candidates are free to change, reorder, delete and add to their choices of courses / colleges as per their preference. | From 7.00 pm 18-03-2023 To 20-03-2023 upto 11.00 am |
| 04 | ಸೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ<br>Publication of first round allotment Result | 20-03-2023 after 6.00 pm |
| 05 | ಪೋಷಕರ ಜೊತೆ ಚರ್ಚಿಸಿ ಸೂಕ್ತವಾದ CHOICE ಅನ್ನು ಆಯ್ಕೆ ಮಾಡಿಕೊಳ್ಳಲು<br>Exercising appropriate CHOICE by the seat allotted candidates in consultation with their parents | From 11.00 am on 21-03-2023 to 22-03-2023 upto 11.59 pm |
| 06 | Choice 1 ಆಯ್ಕೆ ಮಾಡಿದ ಅಭ್ಯರ್ಥಿಗಳು ಶುಲ್ಕ ಪಾವತಿ ಮಾಡುವುದು<br>Payment of fees by Choice 1 Candidates | 21-03-2023 to 23-03-2023 During banking working hours |
| 07 | Choice 1 ಆಯ್ಕೆ ಮಾಡಿ ಶುಲ್ಕ ಪಾವತಿ ಮಾಡಿದ ಅಭ್ಯರ್ಥಿಗಳು ಪ್ರವೇಶ ಆದೇಶವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.<br>Downloading of Admission Orders by fee paid candidates | 21-03-2023 to 24-03-2023 |
| 08 | ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ<br>(ಎಲ್ಲಾ ಮೂಲ ದಾಖಲಾತಿಗಳೊಂದಿಗೆ – Verification slip ನಲ್ಲಿ ನಮೂದಿಸಿರುವಂತೆ)<br>Last Date for Reporting at the Allotted Colleges (Choice -1 Candidates Only) along with all the originals as per Verification slip | 25-03-2023 before 5.30 pm |

ಸಿ.ಸೂ. ಈ ಮೇಲ್ಕಂಡ ವೇಳಾಪಟ್ಟಿಯ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ.
No individual intimation will be sent to candidates with regard to above schedule.

Sd/-
Executive Director.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in